**Akashvani : Bangalore**
**Regional Bulletin In Kannada**
**12.10.2026 / 14.30 hrs**

ಆಕಾಶವಾಣಿ ಬೆಂಗಳೂರು

ಪ್ರದೇಶ ಸಮಾಚಾರ

**12.10.2026 / 14.30 hrs**

**<><*<><>*><>**

ಮುಖ್ಯಾಂಶಗಳು

**<><*<><>*><>**

**೧. ಕಬ್ಬಿಗೆ ಸೂಕ್ತ ಬೆಲೆ ನಿಗದಿ ವಿಚಾರ; ನವದೆಹಲಿಯಲ್ಲಿ ಇಂದು ಸಂಜೆ ಕೇಂದ್ರ ಸಚಿವರನ್ನು ಭೇಟಿಯಾಗಲಿರುವ ರಾಜ್ಯ ರೈತರ ನಿಯೋಗ**

**೨. ಚಿತ್ರದುರ್ಗದಲ್ಲಿ ಭೀಕರ ಬರಗಾಲ; ವಿಶೇಷ ಪ್ಯಾಕೇಜ್ ಘೋಷಣೆ ಮಾಡುವಂತೆ ರೈತರ ಒತ್ತಾಯ**

**೩. ದಸರಾ ಗಜಪಡೆಗೆ ಮೂರನೇ ಹಂತದ ಫಿರಂಗಿ ತಾಲೀಮು ಯಶಸ್ವಿ.; ಶ್ರೀರಂಗಪಟ್ಟಣ ದಸರಾಗೆ ಧನಂಜಯ ಆನೆ ಸಾರಥ್ಯ**

**೪. ರಣಜಿ ಟ್ರೋಫಿ; ವಿಜಯವಾಡದಲ್ಲಿ ಕರ್ನಾಟಕ- ಆಂಧ್ರ ಪ್ರದೇಶ ನಡುವಿನ ಪಂದ್ಯ ಪ್ರಗತಿಯಲ್ಲಿ**

**<><*<><>*><>**

ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸುವಂತೆ ಕಬ್ಬು ಬೆಳೆಗಾರರು ೫೪ ರೈತ ಮುಖಂಡರೊಂದಿಗೆ ನವದೆಹಲಿಗೆ ತೆರಳಿದ್ದಾರೆ. ಇಂದು ಸಂಜೆ ನವದೆಹಲಿಯ ಕೃಷಿ ಭವನದಲ್ಲಿ ನಡೆಯಲಿರುವ ಕೇಂದ್ರ ಸಚಿವರ ಉನ್ನತ ಮಟ್ಟದ ಸಭೆಯಲ್ಲಿ ತಮ್ಮ ಬೇಡಿಕೆಗಳ ಬಗ್ಗೆ ಸಮಾಲೋಚಿಸಿ ಮನವರಿಕೆ ಮಾಡಲಿದ್ದಾರೆ. ಕೇಂದ್ರ ಸರ್ಕಾರದ ಆಹ್ವಾನದ ಮೇರೆಗೆ ನವದೆಹಲಿಗೆ ತೆರಳುತ್ತಿರುವ ರೈತ ಮುಖಂಡರ ನಿಯೋಗದಲ್ಲಿ ಬೆಳಗಾವಿ, ಹಾವೇರಿ, ವಿಜಯಪುರ, ಕೊಪ್ಪಳ, ರಾಯಚೂರು, ಮೈಸೂರು, ಮಂಡ್ಯ, ಉತ್ತರ ಕನ್ನಡ, ಹುಬ್ಬಳ್ಳಿ, ಕಲಬುರ್ಗಿ, ಗದಗ, ಶಿವಮೊಗ್ಗ, ಬಾಗಲಕೋಟೆ, ಮಹಾರಾಷ್ಟ್ರದ ಪುಣೆ, ಕೋರೆಗಾಂವ್, ಕೊಲ್ಲಾಪುರ ಜಿಲ್ಲೆಗಳ ೫೪ ರೈತರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಆಯ್ದ ರೈತರ ಪಟ್ಟಿ ಬಿಡುಗಡೆ ಮಾಡಿದ್ದು, ಕೇಂದ್ರ ಸಚಿವರ ಸಭೆಯಲ್ಲಿ ಭಾಗವಹಿಸಲು ಸೂಚಿಸಲಾಗಿದೆ. ಈ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ ಹೋರಾಟದ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ಕಬ್ಬುಬೆಳೆಗಾರರು ನವದೆಹಲಿಗೆ ಆಗಮಿಸಿ, ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವಂತೆ ಆಹ್ವಾನ ನೀಡಿದ್ದರು.

<><*<><>*><>

ಚಿತ್ರದುರ್ಗ ಜಿಲ್ಲೆಯಲ್ಲಿ ಈ ಬಾರಿ ಮಳೆ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಭೀಕರ ಬರಗಾಲ ತಲೆದೋರಿದೆ. ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟ ಸಂಪೂರ್ಣ ಕುಸಿದಿದ್ದು, ರೈತ ಸಮುದಾಯ ಕಂಗಾಲಾಗಿದೆ. ಜಿಲ್ಲೆಯ ಚಳ್ಳಕೆರೆ ತಾಲೂಕಿನ ಬೇಡರೆಡ್ಡಿಹಳ್ಳಿ ಗ್ರಾಮದಲ್ಲಿ ರೈತರೊಬ್ಬರು ಕೊಳವೆ ಬಾವಿಯಲ್ಲಿ ನೀರಿನ ಕೊರತೆ ಉಂಟಾದ ಕಾರಣ, ಸಾವಿರಾರು ರೂಪಾಯಿ ಬಂಡವಾಳ ಹೂಡಿ ಬೆಳೆದಿದ್ದ ಈರುಳ್ಳಿ ಸಸಿಗಳನ್ನು ಟ್ರಾಕ್ಟರ್ ಮೂಲಕ ನಾಶಪಡಿಸಿದ್ದಾರೆ. ಚಳ್ಳಕೆರೆ ಹಾಗೂ ಮೊಳಕಾಲ್ಮೂರು ಭಾಗದಲ್ಲಿ ಶೇಂಗಾ ಬೆಳೆ ಹೂಕಟ್ಟುವ ಮುನ್ನವೇ ಬಾಡಿಹೋಗಿದೆ. ಶೇಂಗಾ ಬೆಳೆಗೆ ಪರ್ಯಾಯವಾಗಿ ತೊಗರಿ ಬಿತ್ತನೆ ಮಾಡಿದ್ದ ರೈತರಿಗೂ ಬರದ ಬಿಸಿ ತಟ್ಟಿದ್ದು, ಮಳೆ ಕೊರತೆಯಿಂದ ತೊಗರಿ ಬೆಳೆ ರೋಗಕ್ಕೆ ತುತ್ತಾಗುತ್ತಿದೆ. ಸಾಲ ಮಾಡಿ ಬೆಳೆ ಬೆಳೆಯಲು ಮುಂದಾಗಿದ್ದ ಈ ಭಾಗದ ರೈತರು ದಿಢೀರ್ ಕೊಳವೆ ಬಾವಿ ನೀರು ಸ್ಥಗಿತಗೊಂಡಿರುವುದರಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಕೂಡಲೇ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

<><*<><>*><>

ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಅಧಿಕೃತ ಚಾಲನೆ ದೊರತಿದ್ದು, ಈ ನಡುವೆ ಇಂದು ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಗಜಪಡೆ ಮತ್ತು ಕುದುರೆಗಳಿಗೆ ೩ನೇ ಹಂತದ ಕುಶಾಲತೋಪು ಸಿಡಿಸುವ ತಾಲೀಮು ಯಶಸ್ವಿಯಾಗಿ ನಡೆಯಿತು. ಸಿಡಿಮದ್ದು ತಾಲೀಮಿನಲ್ಲಿ ೧೧ ಆನೆಗಳು, ೪೩ ಕುದುರೆಗಳು ಭಾಗಿಯಾಗಿದ್ದವು. ಆದರೆ ಏಕಲವ್ಯ, ಶ್ರೀಕಂಠ ಆನೆಗಳು ಅರಮನೆ ಪೂಜೆಯಲ್ಲಿ ಭಾಗಿಯಾದ ಹಿನ್ನೆಲೆಯಲ್ಲಿ ಸಿಡಿಮದ್ದು ಸಿಡಿಸುವ ತಾಲೀಮಿಗೆ ಗೈರಾಗಿದ್ದವು. ಸಿಡಿಮದ್ದು ತಾಲೀಮಿನಲ್ಲಿ ಅಭಿಮನ್ಯು, ಧನಂಜಯ, ಪ್ರಶಾಂತ, ಸುಗ್ರೀವ, ಶ್ರೀರಾಮ, ಗೋಪಿ, ಮಹೇಂದ್ರ, ಲಕ್ಷ್ಮಿ, ಚೈತ್ರಾ, ರೂಪ, ಕಾವೇರಿ ಆನೆಗಳು ಭಾಗಿಯಾಗಿದ್ದವು. ೭ ಫಿರಂಗಿ ಗಾಡಿಗಳ ಮೂಲಕ ೨೧ ಭಾರೀ ಕುಶಾಲತೋಪು ಸಿಡಿಸಲಾಯಿತು. ಈ ವೇಳೆ ಮಾತನಾಡಿದ ಹಿರಿಯ ಅರಣ್ಯಧಿಕಾರಿ ರವಿಶಂಕರ್, ದಸರಾದಲ್ಲಿ ಪಾಲ್ಗೊಂಡಿರುವ ಆನೆಗಳ ಆರೋಗ್ಯ ಉತ್ತಮವಾಗಿದ್ದು, ಯಶಸ್ವಿ ಜಂಬೂ ಸವಾರಿಗೆ ಗಜಪಡೆಗೆ ಬೇಕಾದ ಎಲ್ಲಾ ತರಬೇತಿ, ತಾಲೀಮುಗಳು ಯಶಸ್ವಿಯಾಗಿ ನಡೆಯುತ್ತಿದೆ. ಜಂಬೂ ಸವಾರಿಯ ಮೂರು ದಿನಗಳ ಮುನ್ನ ಚಿನ್ನದ ಅಂಬಾರಿ ಹೊರುವ ಆನೆಯ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ನಡೆಯುವ ದಸರಾ ಮಹೋತ್ಸವಕ್ಕೆ ಧನಂಜಯ, ಲಕ್ಷ್ಮೀ ಹಾಗೂ ರೂಪಾ ಆನೆಗಳನ್ನು ಆಯ್ಕೆಮಾಡಲಾಗಿದೆ ಎಂದು ತಿಳಿಸಿದ್ದಾರೆ.

<><*<><>*><>

ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದ ಕೊಪ್ಪಳದ ಗವಿಮಠದ ಶ್ರೀ ಅಭಿನವ ಗವಿ ಸಿದ್ದೇಶ್ವರ ಸ್ವಾಮೀಜಿ ಇಂದು ದಸರಾ ಪುಸ್ತಕ ಮೇಳದಲ್ಲಿ ವಿವಿಧ ಪುಸ್ತಕಗಳನ್ನು ವೀಕ್ಷಣೆ ಮಾಡಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಇದೇ ೧೦ರವರೆಗೆ "ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ ಆಯೋಜಿಸಲಾಗಿದೆ. ಇಂದು ದಸರಾ ಪುಸ್ತಕ ಮೇಳದ ಮಳಿಗೆಗಳಿಗೆ ಭೇಟಿ ನೀಡಿದ ಅವರು, ಹಲವಾರು ಪುಸ್ತಕಗಳನ್ನು ವೀಕ್ಷಣೆ ಮಾಡಿದರು. ಸುಮಾರು ಒಂದು ಗಂಟೆಗೂ ಅಧಿಕ ಸಮಯವನ್ನು ಪುಸ್ತಕ ಮೇಳದಲ್ಲಿ ಕಳೆದ ಸ್ವಾಮೀಜಿ, ಕೆಲವು ಪುಸ್ತಕಗಳ ಹೆಸರು ಮತ್ತು ಲೇಖಕರ ಹೆಸರನ್ನು ಸ್ವತಃ ತಮ್ಮ ನೋಟ್ ಪುಸ್ತಕದಲ್ಲಿ ಬರೆದುಕೊಂಡರು. ಸ್ವಾಮೀಜಿ ಅವರಿಗೆ ವಿವಿಧ ಪ್ರಕಾಶಕರು ತಮ್ಮ ಪ್ರಕಾಶನದಲ್ಲಿ ಮುದ್ರಣಗೊಂಡಿರುವ ಪುಸ್ತಕಗಳನ್ನು ನೀಡಿದರು.

<><*<><>*><>

'ಜನ ಸೇವೆಯಿಂದ ದೇಶ ಸೇವೆ' ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ ಕುರಿತ ಒಂದು ವರದಿ ಇಲ್ಲಿದೆ. ೨೦೧೪ರಲ್ಲಿ ಪ್ರಾರಂಭವಾದ ಸ್ವಚ್ಛ ಭಾರತ್ ಅಭಿಯಾನವು ದೇಶದ ನೈರ್ಮಲ್ಯ ಕ್ಷೇತ್ರವನ್ನು ಕೇವಲ ಸರ್ಕಾರದ ಯೋಜನೆಯಾಗಿ ಉಳಿಸದೆ ಜನಪ್ರಿಯ 'ಜನ ಆಂದೋಲನ'ವನ್ನಾಗಿ ಪರಿವರ್ತಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನೈರ್ಮಲ್ಯ ಮತ್ತು ನಾಗರಿಕ ಗೌರವಕ್ಕೆ ಆದ್ಯತೆ ನೀಡಲಾಗಿದ್ದು, ದೇಶಾದ್ಯಂತ ೧೨ ಕೋಟಿಗೂ ಹೆಚ್ಚು ಗೃಹ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ೨೦೧೯ರ ವೇಳೆಗೆ ಭಾರತದ ಗ್ರಾಮಗಳನ್ನು 'ಬಹಿರಂಗ ಶೌಚ ಮುಕ್ತ' ಎಂದು ಘೋಷಿಸಲಾಯಿತು. ಜೊತೆಗೆ, 'ಸ್ವಚ್ಛತಾ ಸರ್ವೇಕ್ಷಣೆ' ಸ್ಪರ್ಧೆಯು ನಗರಗಳು ಮತ್ತು ಪಟ್ಟಣಗಳಲ್ಲಿ ಸ್ವಚ್ಛತೆ, ತ್ಯಾಜ್ಯ ನಿರ್ವಹಣೆ ಹಾಗೂ ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿದೆ. ಈ ಕುರಿತಂತೆ ದಾವಣಗೆರೆಯ ಗೃಹಿಣಿ ಗಾಯತ್ರಿ ಆಕಾಶವಾಣಿಯೊಂದಿಗೆ ಮಾತನಾಡಿ, ಸ್ವಚ್ಛ

ಭಾರತ ಅಭಿಯಾನದಿಂದ ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಸೇರಿದಂತೆ ಬಹುತೇಕ ಎಲ್ಲಾ ಪ್ರದೇಶಗಳಲ್ಲಿ ಸ್ವಚ್ಛತೆ ಕಂಡು ಬರುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

**ಧ್ವನಿ: ಗಾಯತ್ರಿ ( ೨೪ ಸೆಕೆಂಡ್ಸ್)**

**<><*<><>*><>**

ಮಡಿಕೇರಿಯಲ್ಲಿ ಜನೋತ್ಸವ ದಸರಾ ಕಳೆಗಟ್ಟುತ್ತಿದ್ದು ಇಂದು ಸಂಜೆಯಿಂದ ಸಾಂಸ್ಕತಿಕ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಲಿದೆ. ೧೦ ದಿನಗಳ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಡಿಕೇರಿ ಶಾಸಕ ಡಾ.ಮಂತರ್ ಗೌಡ ಉದ್ಘಾಟಿಸಲಿದ್ದಾರೆ. ನಾಳೆ ಸಂಜೆ ೩ನೇ ವರ್ಷದ ಕಾಫಿ ದಸರಾ ಅಂಗವಾಗಿ ೫೪ ಮಳಿಗೆಗಳಲ್ಲಿ ಕಾಫಿಯ ವೈವಿಧ್ಯತೆಯ ಪ್ರದರ್ಶನಕ್ಕೆ ಚಾಲನೆ ದೊರಕಲಿದೆ. ಕಾಫಿ ದಸರಾದೊಂದಿಗೆ, ಕವಿಗೋಷ್ಠಿ, ಕ್ರೀಡಾಕೂಟ, ಜಾನಪದ ದಸರಾ, ಮಕ್ಕಳ ದಸರಾ, ಯುವ ದಸರಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

**<><*<><>*><>**

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ದಾವಣಗೆರೆ ಜಿಲ್ಲೆಯಾದ್ಯಂತ ನಡೆಸಿದ ತಪಾಸಣೆ ವೇಳೆ ವಿವಿಧೆಡೆಯಿಂದ ಒಟ್ಟು ೮೪ ಆಹಾರ ಮಾದರಿಗಳನ್ನು ಪರೀಕ್ಷೆಗಾಗಿ ಸಂಗ್ರಹಿಸಲಾಗಿದೆ ಎಂದು ಜಿಲ್ಲಾ ಅಂಕಿತ ಅಧಿಕಾರಿ ಡಾ.ಜಿ.ಎಸ್.ನಾಗರಾಜ್ ತಿಳಿಸಿದ್ದಾರೆ. ದಾವಣಗೆರೆಯಲ್ಲಿ ೨೭ ಆಹಾರ ಮಾದರಿಗಳು, ಹೊನ್ನಾಳಿ ೧೯, ಚನ್ನಗಿರಿ ೧೮, ಹರಿಹರ ೧೨, ಜಗಳೂರಿನಲ್ಲಿ ೮ ಆಹಾರ ಮಾದರಿ ಸೇರಿದಂತೆ ಒಟ್ಟು ೮೪ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ, ನೈರ್ಮಲ್ಯ ಕಾಯ್ದು ಕೊಳ್ಳದವರಿಗೆ ನೋಟೀಸ್ ಜಾರಿಗೊಳಿಸಲಾಗಿದೆ ಎಂದು ಡಾ.ನಾಗರಾಜ್ ತಿಳಿಸಿದ್ದಾರೆ.

**<><*<><>*><>**

ಜಪಾನ್‌ನಲ್ಲಿ ಇದೇ ೧೪ರಿಂದ ಪ್ರಾರಂಭವಾಗಲಿರುವ ಪ್ರತಿಷ್ಠಿತ ಪ್ಯಾರಾ ಏಷಿಯನ್ ಗೇಮ್ಸ್‌ನ '೧೦ ಮೀಟರ್ ಏರ್ ರೈಫಲ್ ಸ್ಟ್ಯಾಂಡಿಂಗ್' ವಿಭಾಗದಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕುರುವಿನಕೊಪ್ಪ ಗ್ರಾಮದ ಪ್ಯಾರಾ ಶೂಟರ್ ರಾಕೇಶ್ ನಿಡಗುಂದಿ ಭಾಗಿಯಾಗಲಿದ್ದಾರೆ. ಕಳೆದ ಐದು ವರ್ಷಗಳಿಂದ ಶೂಟಿಂಗ್ ಕ್ರೀಡೆಯಲ್ಲಿ ಕಠಿಣ ಅಭ್ಯಾಸ ಮತ್ತು ಶ್ರಮ ವಹಿಸಿರುವ ರಾಕೇಶ್, ಈಗಾಗಲೇ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಹಲವು ಸ್ಪರ್ಧೆಗಳಲ್ಲಿ ಪದಕಗಳನ್ನು ಗೆದ್ದು ಪ್ಯಾರಾ ನ್ಯಾಷನಲ್ ಟೀಮ್‌ನ ಖಾಯಂ ಸದಸ್ಯರಾಗಿದ್ದಾರೆ.

**<><*<><>*><>**

ಆಂಧ್ರ ಪ್ರದೇಶದ ವಿಜಯವಾಡದಲ್ಲಿ ನಡೆಯುತ್ತಿರುವ ಕರ್ನಾಟಕ ಮತ್ತು ಆಂಧ್ರ ಪ್ರದೇಶ ತಂಡಗಳ ನಡುವಿನ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ತಮ್ಮ ಮೊದಲನೇ ಇನ್ನಿಂಗ್ಸ್ ಆರಂಭಿಸಿರುವ ಆಂಧ್ರ ಪ್ರದೇಶ ೨ನೇ ದಿನದಾಟದಲ್ಲಿಂದು ೫ ವಿಕೆಟ್ ನಷ್ಟಕ್ಕೆ ೧೮೬ ರನ್ ಗಳಿಸಿ ಆಡುತ್ತಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ಕರ್ನಾಟಕ ೨೭೪ ರನ್‌ಗಳಿಸಿದೆ.

**<><*<><>*><>**

ಗದಗ ಜಿಲ್ಲೆಯಲ್ಲಿ ೨೦೨೬-೨೭ನೇ ಸಾಲಿನ ಹಿಂಗಾರು ಹಂಗಾಮು ಆರಂಭವಾಗಿದೆ. ಜಿಲ್ಲೆಯ ಹಿಂಗಾರು ಹಂಗಾಮಿನ ಪ್ರಮುಖ ಬೆಳೆಗಳಾದ ಕಡಲೆ, ಜೋಳ, ಶೇಂಗಾ ಹಾಗೂ ಗೋಧಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರ ಹಾಗೂ ಹೆಚ್ಚುವರಿ ಬೀಜ ವಿತರಣಾ ಕೇಂದ್ರಗಳ ಮುಖಾಂತರ ರಿಯಾಯತಿ ದರದಲ್ಲಿ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಚೇತನಾ ಪಾಟೀಲ ತಿಳಿಸಿದ್ದಾರೆ. ಜಿಲ್ಲೆಯ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ೫ ಎಕರೆ ಅಥವಾ ರೈತರ ಹಿಡುವಳಿಗೆ ಅನುಗುಣವಾಗಿ ಬಿತ್ತನೆ ಬೀಜ ವಿತರಿಸಲಾಗುತ್ತಿದೆ. ಜಿಲ್ಲೆಗೆ ಅವಶ್ಯವಿರುವ ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದ್ದು, ಯಾವುದೇ ಬೆಳೆಯ ಬಿತ್ತನೆ ಬೀಜದ ಕೊರತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**<><*<> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಸಂಜೆ ೬.೪೦ ಕ್ಕೆ <>*><>**